**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>**
**<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.</u>**

# <u>Spl.C.1168/2023</u>

ಫಿರ್ಯಾಧಿ : ತ್ಯಾಮಗೊಂಡ್ಲು ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ : 2. ದರ್ಶನ್
ತಂದೆಃ ಲೇಟ್ ಅನಿಲ್
ವಯಸ್ಸುಃ 17 ವರ್ಷ,
ವಾಸಃ ಅಡ್ಡಿಗನಹಳ್ಳಿ,
ಹೆಸರಘಟ್ಟ ಹೋಬಳಿ,
ಬೆಂಗಳೂರು ಉತ್ತರ ತಾಲ್ಲೂಕು,
ಬೆಂಗಳೂರು.

**<u>ದೋಷಾರೋಪಣೆ</u>**

ನಾನು, ಶ್ರೀ ಎಂ. ಎಲ್. ರಘುನಾಥ್ ಬಿ.ಎ., ಎಲ್‌ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನಿಮ್ಮ – 2 ನೇ ಆರೋಪಿಯ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

1 ನೇ ಆರೋಪಿ ಲಕ್ಷ್ಮಣ 3 ನೇ ಆರೋಪಿ ಶ್ರೀಮತಿ ಕಲ್ಪನ ಇವರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ ವಿಚಾರ 3 ನೇ ಆರೋಪಿಯ ಗಂಡ ಬೀರೇಗೌಡ ಇವರಿಗೆ ಗೊತ್ತಾದ ಕಾರಣ ಅವರ ಅನೈತಿಕ ವ್ಯವಹಾರಕ್ಕೆ ತೊಂದರೆ ಆಗುತ್ತದೆ ಎಂದು ತಿಳಿದು ಬೀರೇಗೌಡ ಇವರನ್ನು ಕೊಲೆ ಮಾಡುವ ಏಕೋದ್ದೇಶದಿಂದ ಆರೋಪಿಯಾದ ನೀನು ಇತರೆ ಆರೋಪಿಗಳೊಂದಿಗೆ ಅಕ್ರಮಕೂಟ ಸೇರಿಕೊಂಡು ಅಪರಾಧಿಕ ಒಳಸಂಚು

ರೂಪಿಸಿದ ಕಾರಣ ಭಾ.ದಂ.ಸಂ.ಕಲಂ.120(ಬಿ) ಇದರ ಜೊತೆ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

2. ಎರಡನೇಯದಾಗಿ ಆರೋಪಿಯಾದ ನೀನು ಇತರೆ ಆರೋಪಿಗಳೊಂದಿಗೆ ಅಕ್ರಮ ಕೂಟದ ಸದಸ್ಯರಾಗಿ ಮುಂದುವರೆಯುತ್ತಾ ದಿನಾಂಕ 21-11-2020 ರಂದು ರಾತ್ರಿ 12:00 ಗಂಟೆ ಸುಮಾರಿಗೆ ಬೆಂಗಳೂರು ಉತ್ತರ ತಾಲ್ಲೂಕು, ರಾಜಾನುಕುಂಟೆ ಗ್ರಾಮದಲ್ಲಿರುವ ಚಾಸಾ.13 ಅಬ್ದುಲ್ ರೆಹಮಾನ್ ಇವರ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದ ಬೀರೇಗೌಡ ಬಿನ್ ಲೇಟ್ ತಿಪ್ಪಣ್ಣ ಇವರು ಮಲಗಿದ್ದ ಮನೆಗೆ ಹೋಗಿ ಬೀರೇಗೌಡ ಇವರು ಕಿರುಚಾಡದಂತೆ ಕಾನೂನು ಸಂಘರ್ಷಕ್ಕೊಳಗಾದ ಬಾಲಕನಾದ 2ನೇ ಆರೋಪಿ ಆದ ನೀನು ಬೀರೇಗೌಡರ ಮುಖದ ಮೇಲೆ ಅಲ್ಲೇ ಇದ್ದ ದಿಂಬನ್ನು ಅದುಮಿ ಹಿಡಿದಿದ್ದು, 3ನೇ ಆರೋಪಿ ಶ್ರೀಮತಿ ಕಲ್ಪನ ಬೀರೇಗೌಡರ ಕಾಲನ್ನು ಹಿಡಿದುಕೊಂಡಿದ್ದು, 1ನೇ ಆರೋಪಿ ಲಕ್ಷ್ಮಣ ಚಾಕುವಿನಿಂದ ಬೀರೇಗೌಡರ ಕತ್ತಿನ ಬಳಿ, ಬಲಪಕ್ಕೆಗೆ ಹಾಗೂ ಬಲಗಡೆ ಕಿವಿಗೆ ತಿವಿದಿದ್ದು, ಅಜಯ್ ತನ್ನ ಬಳಿ ಇದ್ದ ಚಾಕುವಿನಿಂದ ಬೀರೇಗೌಡರ ಎದೆಯ ಎಡಭಾಗ, ಎದೆಯ ಮಧ್ಯಭಾಗ ಮತ್ತು ಹೊಟ್ಟೆಯ ಮಧ್ಯಭಾಗಕ್ಕೆ ತಿವಿದಿದ್ದು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಪ್ರದೀಪನು ತನ್ನ ಬಳಿ ಇದ್ದ ಚಾಕುವಿನಿಂದ ಬೀರೇಗೌಡರ ಬೆನ್ನಿನ ಎಡ ಭಾಗದಲ್ಲಿ ಮೂರು ಕಡೆ, ಎಡ ಮುಂಗೈಗೆ ಹೊಡೆದು ಬೀರೇಗೌಡರನ್ನು ಕೊಲೆ ಮಾಡಿದ ಕಾರಣ ಭಾ.ದಂ.ಸಂ.ಕಲಂ.302 ಇದರ ಜೊತೆ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

3. ಮೂರನೇಯದಾಗಿ ಕಾನೂನು ಸಂಘರ್ಷಕ್ಕೊಳಗಾದ ಬಾಲಕನಾದ ನೀನು ಇತರೆ ಆರೋಪಿಗಳೊಂದಿಗೆ ಅಕ್ರಮಕೂಟದ ಸದಸ್ಯರಾಗಿ ಮುಂದುವರೆಯುತ್ತಾ ಬೀರೇಗೌಡರನ್ನು ಕೊಲೆ ಮಾಡಿ, ಅದನ್ನು ಮರೆ ಮಾಚಲು ಬೀರೇಗೌಡರ ಶವವನ್ನು ಆರೋಪಿ ಅಜಯ್ ಇವರು ತಂದಿದ್ದ ಚಾಸಾ.4 ಸಂತೋಷ್ ಕುಮಾರ್ ಇವರಿಗೆ ಸೇರಿದ

KA-05-AF-8866 ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು 1 ನೇ ಆರೋಪಿ ಲಕ್ಷ್ಮಣ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕ 2 ನೇ ಆರೋಪಿಯಾದ ನೀನು ಹಾಗೂ ಬೀರೇಗೌಡರಿಗೆ ಸೇರಿದ KA-04-A-6008 ಟಾಟಾ ಏಸ್ ವಾಹನದೊಂದಿಗೆ ಆರೋಪಿ ಅಜಯ್ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಪ್ರದೀಪ ಇವರೊಂದಿಗೆ ಡಾಬಾಸ್ ಪೇಟೆ ರಸ್ತೆಯಲ್ಲಿ ತುಮಕೂರು ಕಡೆಗೆ ಹೋಗಿ ನಂತರ ಟಾಟಾ ಏಸ್ ವಾಹನ ಹಾಗೂ ಕಾರನ್ನು ಬಲಭಾಗದ ರಸ್ತೆಗೆ ತಿರುಗಿಸಿ ಅಪ್ಪಕಾರನಹಳ್ಳಿ ಮತ್ತು ಎಲ್ಲೆಕಲ್ಲು ರಸ್ತೆಯಲ್ಲಿ ರೇವಣ್ಣನವರ ಜಮೀನಿನ ನೇರದಲ್ಲಿ ರಸ್ತೆಯ ಕಾಮಗಾರಿ ನಿಮಿತ್ತ ಹಾಕಿದ್ದ ಜಲ್ಲಿಕಲ್ಲಿನಲ್ಲಿ KA-07-A-6008 ಟಾಟಾ ಏಸ್ ವಾಹನ ಹೂತುಕೊಂಡ ಕಾರಣ ಬೀರೇಗೌಡ ಶವವನ್ನು ಟಾಟಾ ಏಸ್ ವಾಹನದ ಚಾಲಕನ ಸೀಟಿನಲ್ಲಿ ಕೂರಿಸಿ ಅಪಘಾತವಾದಂತೆ ಬಿಂಬಿಸಲು ಜಲ್ಲಿಕಲ್ಲನ್ನು ಎತ್ತಿಕೊಂಡು ಟಾಟಾ ಏಸ್ ವಾಹನದ ಮುಂಭಾಗದ ಗ್ಲಾಸ್ ಹೊಡೆದುಹಾಕಿ ಸಾಕ್ಷ್ಯವನ್ನು ಮರೆಮಾಚಲು ಯತ್ನಿಸಿದ ಕಾರಣ ಭಾ.ದಂ.ಸಂ.ಕಲಂ.201 ಇದರ ಜೊತೆ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಈ ದಿನ ದಿನಾಂಕ 18 ನೇ ಮಾರ್ಚ್, 2024)**

**(ಎಂ.ಎಲ್. ರಘುನಾಥ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.